# ದಿ ಸೌತ್ ಕೆನರಾ ಗವರ್ನ್‌ಮೆಂಟ್ ಆಫೀಸರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿ.,

ಕೊಡಿಯಾಲ್‌ಬೈಲ್, ಮಂಗಳೂರು

## ಚುನಾವಣಾ ನೋಟೀಸು

ದಿನಾಂಕ : 07-01-2024ನೇ ಭಾನುವಾರ
ಸಮಯ : ಬೆಳಿಗ್ಗೆ 09.00ರಿಂದ ಸಂಜೆ 04.00ರ ವರೆಗೆ
ಸ್ಥಳ : ಭುವನೇಂದ್ರ ಸಭಾಭವನ, ಕೆನರಾ ಹೈಸ್ಕೂಲ್ ಮೈನ್ ಆವರಣ,
ಡೊಂಗರಕೇರಿ ರಸ್ತೆ, ಕೊಡಿಯಾಲ್‌ಬೈಲ್, ಮಂಗಳೂರು-575 003

ತೆರೆದ ಅಂಚೆ

ರಿಗೆ.

ಶ್ರೀಮತಿ/ಶ್ರೀ____________________

**ಸುಧೀರ್ ಕುಮಾರ್ ಜೆ, ರಿಟರ್ನಿಂಗ್ ಅಧಿಕಾರಿ, ದಿ ಸೌತ್ ಕೆನರಾ ಗವರ್ನ್‌ಮೆಂಟ್ ಆಫೀಸರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿ., ಕೊಡಿಯಾಲ್‌ಬೈಲ್, ಮಂಗಳೂರು**

**ನಮೂನೆ XII**

{ನಿಯಮ 14(3) }

# ಚುನಾವಣಾ ನೋಟೀಸು

ದಿ ಸೌತ್ ಕೆನರಾ ಗವರ್ನ್‌ಮೆಂಟ್ ಆಫೀಸರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿ., ಕೊಡಿಯಾಲ್‌ಬೈಲ್, ಮಂಗಳೂರು ಇದರ ಆಡಳಿತ ಮಂಡಲಿ ನಿರ್ದೇಶಕರ ಸಾಮಾನ್ಯ ಚುನಾವಣೆಯನ್ನು ಭುವನೇಂದ್ರ ಸಭಾಭವನ, ಕೆನರಾ ಹೈಸ್ಕೂಲ್ ಮೈನ್ ಆವರಣ, ಡೊಂಗರಕೇರಿ ರಸ್ತೆ, ಕೊಡಿಯಾಲ್‌ಬೈಲ್, ಮಂಗಳೂರು ದಿನಾಂಕ: 07-01-2024ರಂದು ಪೂರ್ವಾಹ್ನ 9.00 ಗಂಟೆಯಿಂದ ಸಂಜೆ 4.00 ಗಂಟೆಯವರೆಗೆ ನಡೆಯಲಿದ್ದು, ದಿ ಸೌತ್ ಕೆನರಾ ಗವರ್ನ್‌ಮೆಂಟ್ ಆಫೀಸರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿ., ಕೊಡಿಯಾಲ್‌ಬೈಲ್, ಮಂಗಳೂರು ಇದರ ಈ ಕೆಳಕಂಡ ಆಡಳಿತ ಮಂಡಲಿ ನಿರ್ದೇಶಕರ ಸ್ಥಾನಗಳಿಗಾಗಿ ಚುನಾವಣಾ ದಿನಾಂಕದಿಂದ ಮುಂದಿನ 5 ವರ್ಷಗಳ ಅವಧಿಗೆ ಚುನಾವಣೆಯನ್ನು ನಡೆಸಲಾಗುವುದೆಂದು ನೋಟೀಸು ನೀಡಲಾಗಿದೆ.

| ಕ್ರ.ಸಂ. ಆಯ್ಕೆಯಾಗಬೇಕಾದ ಸ್ಥಾನಗಳು | ಸ್ಥಾನಗಳ ಸಂಖ್ಯೆ |
|---|---|
| 1) ಸಾಮಾನ್ಯ ಸ್ಥಾನಗಳು | 07 |
| 2) ಪರಿಶಿಷ್ಟ ಜಾತಿ ಮೀಸಲು ಸ್ಥಾನ | 01 |
| 3) ಪರಿಶಿಷ್ಟ ಪಂಗಡ ಮೀಸಲು ಸ್ಥಾನ | 01 |
| 4) ಹಿಂದುಳಿದ ಪ್ರವರ್ಗ 'ಎ' ಮೀಸಲು ಸ್ಥಾನ | 01 |
| 5) ಹಿಂದುಳಿದ ಪ್ರವರ್ಗ 'ಬಿ' ಮೀಸಲು ಸ್ಥಾನ | 01 |
| 6) ಮಹಿಳಾ ಮೀಸಲು ಸ್ಥಾನ | 02 |
| ಒಟ್ಟು | 13 ಸ್ಥಾನಗಳು |

ಸದರಿ ಚುನಾವಣಾ ವೇಳಾಪಟ್ಟಿಯನ್ನು ಈ ಕೆಳಗಿನಂತೆ ಪ್ರಕಟಿಸಲಾಗಿದೆ.

| ಕ್ರ.ಸಂ | ವಿವರಗಳು | ದಿನಾಂಕ ಮತ್ತು ಸಮಯ | ನಿಯುಕ್ತಿಗೊಳಿಸಲಾದ ಅಧಿಕಾರಿ ಹಾಗೂ ಸ್ಥಳ |
|---|---|---|---|
| ಎ | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಪ್ರಾರಂಭದ ದಿನಾಂಕ | ದಿ: 25-12-2023ರಂದು ಬೆಳಿಗ್ಗೆ 11-00 ರಿಂದ ಅಪರಾಹ್ನ 2-00 ಗಂಟೆಯವರೆಗೆ | ರಿಟರ್ನಿಂಗ್ ಅಧಿಕಾರಿ/ ಸಹಾಯಕ ಅಧಿಕಾರಿ ಯವರಿಗೆ ಬ್ಯಾಂಕಿನ ಕಚೇರಿಯಲ್ಲಿ |
| ಬಿ | ಆಕಾಂಕ್ಷೆವುಳ್ಳ ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ (ನಿಯಮ 14ಎ) | ದಿ:30-12-2023ರಂದು ಬೆಳಿಗ್ಗೆ 11-00 ರಿಂದ ಅಪರಾಹ್ನ 2-00 ಗಂಟೆಯವರೆಗೆ | ರಿಟರ್ನಿಂಗ್ ಅಧಿಕಾರಿ/ ಸಹಾಯಕ ಅಧಿಕಾರಿಯವರಿಗೆ ಬ್ಯಾಂಕಿನ ಕಚೇರಿಯಲ್ಲಿ |
| ಸಿ | ರಿಟರ್ನಿಂಗ್ ಅಧಿಕಾರಿಯಿಂದ ನಾಮಪತ್ರಗಳ ಪರಿಶೀಲನೆ (ನಿಯಮ 14ಬಿ) | ದಿ:31-12-2023ರಂದು ಮಧ್ಯಾಹ್ನ 3-00 ಗಂಟೆಗೆ | ರಿಟರ್ನಿಂಗ್ ಅಧಿಕಾರಿಯವರಿಂದ ಬ್ಯಾಂಕಿನ ಕಚೇರಿಯಲ್ಲಿ |
| ಡಿ | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14ಬಿ(4)) | ದಿ:31-12-2023ರಂದು ನಾಮಪತ್ರಗಳ ಪರಿಶೀಲನೆಯ ನಂತರ | ರಿಟರ್ನಿಂಗ್ ಅಧಿಕಾರಿಯವರಿಂದ ಬ್ಯಾಂಕಿನ ಕಚೇರಿಯಲ್ಲಿ |

| | | | |
|---|---|---|---|
| ಇ | ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳಿಂದ ನಾಮಪತ್ರಗಳ ಹಿಂತೆಗೆದುಕೊಳ್ಳಲು ಕೊನೆಯ ದಿನ. (ನಿಯಮ 14ಸಿ) | ದಿ:01-01-2024ರಂದು 11-00 ಗಂಟೆಯ ಒಳಗೆ | ರಿಟರ್ನಿಂಗ್ ಅಧಿಕಾರಿ ಯವರಲ್ಲಿ ಬ್ಯಾಂಕಿನ ಕಚೇರಿಯಲ್ಲಿ |
| ಎಫ್ | ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಪಟ್ಟಿಯ ಪ್ರಕಟಣೆ (ನಿಯಮ 14ಡಿ) | ದಿ: 01-01-2024ರಂದು 11-00 ಗಂಟೆಯ ನಂತರ | ರಿಟರ್ನಿಂಗ್ ಅಧಿಕಾರಿಯವರಿಂದ ಬ್ಯಾಂಕಿನ ಕಚೇರಿಯಲ್ಲಿ |
| ಜಿ | ಮತದಾನದ ದಿನಾಂಕ, ಸ್ಥಳ ಮತ್ತು ಸಮಯ | ದಿ: 07-01-2024ರಂದು ಪೂರ್ವಾಹ್ನ 9-00 ಗಂಟೆಯಿಂದ ಸಂಜೆ ಗಂಟೆ 4-00ರ ತನಕ | ರಿಟರ್ನಿಂಗ್ ಅಧಿಕಾರಿಯವರಿಂದ ಭುವನೇಂದ್ರ ಸಭಾಭವನ, ಕೆನರಾ ಹೈಸ್ಕೂಲ್ ಮೈನ್ ಆವರಣ, ಡೊಂಗರಕೇರಿ ರಸ್ತೆ, ಕೊಡಿಯಾಲ್‌ಬೈಲ್, ಮಂಗಳೂರು |
| ಹೆಚ್ | ಮತ ಎಣಿಕೆಯ ದಿನ ಮತ್ತು ದಿನಾಂಕ | ದಿ: 07-01-2024ರಂದು | ಮತದಾನ ಮುಗಿದ ನಂತರ |
| ಐ | ರಿಟರ್ನಿಂಗ್ ಅಧಿಕಾರಿಯಿಂದ ಫಲಿತಾಂಶ ಘೋಷಣೆ | ದಿ: 07-01-2024ರಂದು | ಮತಗಳ ಎಣಿಕೆ ಮುಗಿದ ನಂತರ (ರಿಟರ್ನಿಂಗ್ ಆಫೀಸರ್) |

ಸೂಚನೆಗಳು :-

1) ಬ್ಯಾಂಕಿನ ಬೈಲಾ ಪ್ರಕಾರ ಒಟ್ಟು 13 ನಿರ್ದೇಶಕರುಗಳಿಗೆ ಚುನಾವಣೆ ನಡೆಸಲಾಗುವುದು. ಇದರಲ್ಲಿ ಸಾಮಾನ್ಯ ಸ್ಥಾನಗಳ ಸಂಖ್ಯೆ-07, ಪರಿಶಿಷ್ಟ ಜಾತಿ ಮೀಸಲು ಸ್ಥಾನ-1, ಪರಿಶಿಷ್ಟ ಪಂಗಡ ಮೀಸಲು ಸ್ಥಾನ ಸಂಖ್ಯೆ-1, ಹಿಂದುಳಿದ ವರ್ಗ ' ಎ ' ಸ್ಥಾನ ಸಂಖ್ಯೆ-1, ಹಿಂದುಳಿದ ವರ್ಗ ' ಬಿ ' ಸ್ಥಾನ ಸಂಖ್ಯೆ-1, ಮಹಿಳಾ ಮೀಸಲು ಸ್ಥಾನ-2
2) ನಾಮಪತ್ರವನ್ನು ಉಮೇದ್ವಾರರು ಸ್ವತಃ ಆಗಮಿಸಿ ಚುನಾವಣಾ ವೇಳಾಪಟ್ಟಿಯ ಪ್ರಕಾರ ಬ್ಯಾಂಕಿನ ಕೆಲಸದ ಸಮಯದಲ್ಲಿ ರಿಟರ್ನಿಂಗ್ ಆಫೀಸರ್‌ಗೆ ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಯವರಿಗೆ ಬೆಳಿಗ್ಗೆ 11-00 ರಿಂದ ಅಪರಾಹ್ನ 2-00ರ ಒಳಗೆ ತಲುಪಿಸತಕ್ಕದ್ದು. ಮಾದರಿ ನಾಮಪತ್ರವನ್ನು ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಂದ ಪಡೆಯಬಹುದಾಗಿದೆ. ನಾಮಪತ್ರಗಳನ್ನು ನಿಗದಿತ ಅವಧಿ ಮತ್ತು ಸಮಯದಲ್ಲಿ ಶ್ರೀ ನಾಗೇಂದ್ರ. ಬಿ. ಅಧೀಕ್ಷಕರು ಇವರಿಗೆ ರಿಟರ್ನಿಂಗ್ ಅಧಿಕಾರಿಯವರ ಪರವಾಗಿ ಪಡೆಯಲು ಅಧಿಕಾರ ನೀಡಲಾಗಿದೆ.
3) ನಾಮಪತ್ರಗಳ ಪರಿಶೀಲನೆಯ ಸಂದರ್ಭದಲ್ಲಿ ಉಮೇದುವಾರರು ಅಥವಾ ಸೂಚಕರು ಹಾಜರಿರಬಹುದು.
4) ನಾಮಪತ್ರ ಸಲ್ಲಿಸುವ ಮಹಿಳೆ/ಹಿಂದುಳಿದ ವರ್ಗ/ಪ.ಜಾತಿ/ಪ.ಪಂಗಡ ರೂ.1000/- ಮತ್ತು ಸಾಮಾನ್ಯ ಸದಸ್ಯರು ರೂ.2000/-ಚುನಾವಣಾ ಠೇವಣಿಯನ್ನು ಬ್ಯಾಂಕಿಗೆ ಪಾವತಿಸಿ ಮೂಲ ರಶೀದಿ ಅಥವಾ ಡಿ.ಡಿ ಅಥವಾ ಪೇ ಆರ್ಡರ್‌ನ್ನು ನಾಮಪತ್ರದೊಂದಿಗೆ ಲಗ್ತೀಕರಿಸುವುದು.
5) ನಾಮಪತ್ರಕ್ಕೆ ಅಥವಾ ಉಮೇದುವಾರಿಕೆ ಅರ್ಜಿಗೆ ಮತ ಚಲಾಯಿಸಲು ಅರ್ಹತೆಯಿರುವ ಕನಿಷ್ಠ ಒರ್ವ ಸದಸ್ಯ ನಾಮಪತ್ರದಲ್ಲಿ ಸಹಿ ಮಾಡುವ ಮೂಲಕ ಸೂಚಿಸತಕ್ಕದ್ದು. ಆದರೆ ಒಂದೇ ಮತಕ್ಷೇತ್ರದಿಂದ ಒಬ್ಬರಿಗಿಂತ ಹೆಚ್ಚಿನ ಅಭ್ಯರ್ಥಿಗಳನ್ನು ಸೂಚಿಸತಕ್ಕದ್ದಲ್ಲ.
6) ನಾಮಪತ್ರವನ್ನು ಹಿಂತೆಗೆದುಕೊಳ್ಳುವ ಬಗ್ಗೆ ಅರ್ಜಿಯನ್ನು ನಮೂನೆ XVರಲ್ಲಿ ಲಿಖಿತ ಮೂಲಕ ರಿಟರ್ನಿಂಗ್ ಅಧಿಕಾರಿಯವರಿಗೆ ಉಮೇದುವಾರರು ಖುದ್ದಾಗಿ ಆಗಮಿಸಿ ನೀಡತಕ್ಕದ್ದು. ಮಾದರಿ ಅರ್ಜಿ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಂದ ಪಡೆಯಬಹುದಾಗಿದೆ.
7) ಸಹಕಾರ ಸಂಘಗಳ ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಹಾಗೂ ಜಿಲ್ಲಾ ಚುನಾವಣಾಧಿಕಾರಿಯವರಿಂದ ಪರಿಶೀಲಿಸಿ ಅನುಮೋದಿಸಲ್ಪಟ್ಟು, ಸಂಘದಲ್ಲಿ ಪ್ರಕಟಿತಗೊಂಡಿರುವ ಅಂತಿಮ ಅರ್ಹ ಮತದಾರರ ಪಟ್ಟಿಯಲ್ಲಿನ ಸದಸ್ಯರಿಗೆ ಮಾತ್ರ ಮತದಾನದ ಹಕ್ಕು ಇರುತ್ತದೆ.

8) 1959ರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 20(2)(ಎ-iii)ರಂತೆ ಚುನಾವಣೆ ನಡೆಯುವ ದಿನಾಂಕಕ್ಕೆ ಮುಂಚಿತವಾಗಿ 12 ತಿಂಗಳ ಒಳಗೆ ಬ್ಯಾಂಕಿನ ಸದಸ್ಯರಾಗಿರುವವರಿಗೆ ಮತದಾನದ ಹಕ್ಕು ಇರುವುದಿಲ್ಲ.

9) ಕರ್ನಾಟಕ ಸಹಕಾರ ಸಂಘಗಳ ನಿಯಮ 13ಎರಂತೆ ಬ್ಯಾಂಕಿನ ಪ್ರತಿಯೊಬ್ಬ ಅರ್ಹ ಸದಸ್ಯರು ಭಾವಚಿತ್ರವುಳ್ಳ ಅಧಿಕೃತ ಗುರುತಿನ ಚೀಟಿಯನ್ನು ಹೊಂದಿರತಕ್ಕದ್ದು. ಮತ್ತು ನಿಯಮ 14ಓ ರಂತೆ ಹಾಜರುಪಡಿಸದೆ ಇದ್ದಲ್ಲಿ ಮತದಾನಕ್ಕೆ ಅವಕಾಶವಿರುವುದಿಲ್ಲ.

10) ಅಭ್ಯರ್ಥಿ ತನ್ನ ನಾಮಪತ್ರವನ್ನು ಸಮರ್ಪಕವಾಗಿ ಭರ್ತಿಗೊಳಿಸತಕ್ಕದ್ದು ಹಾಗೂ ತಾನು ಸ್ಪರ್ಧಿಸುವ ಸ್ಥಾನವನ್ನು ಸ್ಪಷ್ಟವಾಗಿ ನಾಮಪತ್ರದಲ್ಲಿ ನಮೂದಿಸತಕ್ಕದ್ದು. ಮತ್ತು ಮೀಸಲು ಸ್ಥಾನದ ಬಗ್ಗೆ ಘೋಷಣೆ ಒಳಗೊಂಡಿರತಕ್ಕದ್ದು. ಒಂದಕ್ಕಿಂತ ಹೆಚ್ಚಿನ ಸ್ಥಾನಕ್ಕೆ ಸ್ಪರ್ಧಿಸುವಂತಿಲ್ಲ.

11) ಚುನಾವಣಾ ಆಯೋಗವು ಮಾನ್ಯತೆ ಪಡೆದಿರುವ ರಾಜಕೀಯ ಪಕ್ಷಗಳಿಗೆ ನೀಡಿರುವ ಚಿಹ್ನೆಗಳನ್ನು ಹೊರತುಪಡಿಸಿ ಮುಕ್ತ ಚಿಹ್ನೆಗಳನ್ನು ಮಾತ್ರ ಪಡೆಯಬಹುದು. ವಿವರಗಳನ್ನು ಕೇಂದ್ರ ಕಛೇರಿಯ ನೋಟೀಸು ಬೋರ್ಡಿನಲ್ಲಿ ಪ್ರಕಟಿಸಲಾಗುವುದು. ಚಿಹ್ನೆಗಳನ್ನು ನೀಡುವ ಅಂತಿಮ ಅಧಿಕಾರ ರಿರ್ಟನಿಂಗ್ ಅಧಿಕಾರಿಯವರದ್ದಾಗಿರುತ್ತದೆ.

12) ಸಹಕಾರ ಸಂಘಗಳ ನಿಯಮ 14(ಸಿ)ರಂತೆ ನಾಮಪತ್ರವನ್ನು ಹಿಂದಕ್ಕೆ ಪಡೆಯಲು ಸಲ್ಲಿಸಿರುವ ಸೂಚನೆ/ಅರ್ಜಿಯನ್ನು ಭೌತಿಕವಾಗಿ ಹಿಂದಕ್ಕೆ ಪಡೆಯಲು ಅವಕಾಶವಿರುವುದಿಲ್ಲ.

13) ಸಹಕಾರ ಸಂಘಗಳ ನಿಯಮ 14(ಸಿ)(1)ರಂತೆ ನಾಮಪತ್ರವನ್ನು ವಾಪಾಸು ಪಡೆಯಲು ಇಚ್ಛಿಸುವ ಅಭ್ಯರ್ಥಿಯು ಖುದ್ದಾಗಿ ಹಾಜರಾಗಿ ಲಿಖಿತ ಅರ್ಜಿಯನ್ನು ಬರೆದು ಸಹಿ ಮಾಡಿ ಸಲ್ಲಿಸತಕ್ಕದ್ದು.

14) ಪ.ಜಾ/ಪ.ಪಂಗಡ ಮತ್ತು ಹಿಂದುಳಿದ ವರ್ಗದ ಸ್ಥಾನಕ್ಕೆ ನಾಮಪತ್ರವನ್ನು ಸಲ್ಲಿಸಿರುವ ಅಭ್ಯರ್ಥಿಯು ನಾಮಪತ್ರದೊಂದಿಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಜಾತಿ/ವರ್ಗದ ಮೂಲ ಪ್ರಮಾಣ ಪತ್ರವನ್ನು ನಾಮಪತ್ರದೊಂದಿಗೆ ಲಗತ್ತಿಸತಕ್ಕದ್ದು. ಹಿಂದುಳಿದ ವರ್ಗದ ಮೀಸಲಾತಿಗೆ ಸಂಬಂಧಿಸಿದಂತೆ ಇತರೆ ದೃಢೀಕರಣಗಳನ್ನು ಮಾನ್ಯ ಮಾಡಲಾಗುವುದಿಲ್ಲವಾದ್ದರಿಂದ ಚುನಾವಣೆ ಉದ್ದೇಶಕ್ಕೆಂದು ತಹಶೀಲ್ದಾರರು ನೀಡುವ ಹಿಂದುಳಿದ ಪ್ರವರ್ಗ "ಎ" ಮತ್ತು ಹಿಂದುಳಿದ ಪ್ರವರ್ಗ "ಬಿ" ದೃಢೀಕರಣದ ಮೂಲ ಪ್ರಮಾಣ ಪತ್ರವನ್ನು ಹಿಂದುಳಿದ ವರ್ಗದ ಸ್ಥಾನಕ್ಕೆ ಸ್ಪರ್ಧಿಸುವ ಉಮೇದುವಾರರು ಕಡ್ಡಾಯವಾಗಿ ನಾಮಪತ್ರದೊಂದಿಗೆ ಲಗತ್ತಿಸಬೇಕು.

15) ಈ ಚುನಾವಣಾ ಪ್ರಕ್ರಿಯೆಯು ಸಕ್ಷಮ ಪ್ರಾಧಿಕಾರದಿಂದ ಪರಿಶೀಲಿಸಿ ದೃಢೀಕರಿಸಲ್ಪಟ್ಟ ಅರ್ಹ ಮತದಾರರ ಪಟ್ಟಿಯನ್ವಯ ನಡೆಯುತ್ತದೆ.

ಸಹಿ/-

ಸ್ಥಳ : ಡೊಂಗರಕೇರಿ
ದಿನಾಂಕ : 15-12-2023

**(ಸುಧೀರ್ ಕುಮಾರ್ ಜೆ)**
ರಿಟರ್ನಿಂಗ್ ಅಧಿಕಾರಿ
ದಿ ಸೌತ್ ಕೆನರಾ ಗವರ್ನ್‌ಮೆಂಟ್ ಆಫೀಸರ್ಸ್ ಕೋ-ಆಪರೇಟಿವ್
ಬ್ಯಾಂಕ್ ನಿ., ಕೊಡಿಯಾಲ್‌ಬೈಲ್, ಮಂಗಳೂರು ಹಾಗೂ ಸಹಕಾರಿ
ಸಂಘಗಳ ಸಹಾಯಕ ನಿಬಂಧಕರು, ಮಂಗಳೂರು ಉಪ ವಿಭಾಗ, ಮಂಗಳೂರು

**ಸದಸ್ಯರ ಗಮನಕ್ಕೆ**

ಬ್ಯಾಂಕಿನ ಉಪವಿಧಿ ಸಂಖ್ಯೆ 17ರಂತೆ 'ಎ' ದರ್ಜೆಯ ಸದಸ್ಯರು ತಮ್ಮ ಸರಕಾರಿ ಸೇವೆಯಿಂದ ಯಾವುದೇ ಕಾರಣಕ್ಕೂ ನಿವೃತ್ತಿಯಾದಲ್ಲಿ ಇವರು ಬ್ಯಾಂಕಿನಲ್ಲಿ ಹೊಂದಿರುವ ಸದಸ್ಯತ್ವವನ್ನು 'ಸಿ' ದರ್ಜೆಗೆ ವರ್ಗಾಯಿಸುವುದು ಕಡ್ಡಾಯವಾಗಿರುತ್ತದೆ. ಇಂತಹ 'ಸಿ ದರ್ಜೆಯ ಸದಸ್ಯರು ಬ್ಯಾಂಕಿನ ಆಡಳಿತ ಮಂಡಲಿ ನಿರ್ದೇಶಕರಾಗಿ ಆಯ್ಕೆಯಾಗಲು ಅಥವಾ ಮುಂದುವರೆಯಲು ಅರ್ಹತೆಗಳಿರುವುದಿಲ್ಲ.